ಅಸಲು ದಾವಾ ಸಂಖ್ಯೆ- 288/2013
ಪಿಡಬ್ಲ್ಯೂ- 01
ದಿನಾಂಕಃ 11-03-2020.
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಮ್ ಎಸ್ ಎಮ್ ವಾದಿ ಪರ ವಕೀಲರಿಂದ

ಪ್ರಮಾಣ ಪತ್ರ ಬರೆಯಲು ನಾನೇ ಮಾಹಿತಿ ಕೊಟ್ಟಿದ್ದೇನೆ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯರು ಸೃಷ್ಟಿಸಿಕೊಂಡ ದಾಖಲೆಗಳು ಖೊಟ್ಟಿಯಾಗಿರುವುದಾಗಿ ಠರಾಯಿಸಬೇಕೆಂದು ಬರೆಸಿದ್ದೇನೆ ಎಂದರೆ ಸರಿ. ವಾದ ಪತ್ರದಲ್ಲಿ ಪ್ರತಿವಾದಿಯರ ದಾಖಲೆಗಳು ಖೊಟ್ಟಿಯಾಗಿವೆಂದು ಅವುಗಳನ್ನು ರದ್ದುಗೊಳಿಸುವಂತೆ ಕೋರಿ ಮಾಗಣೆ ಮಾಡಿಕೊಂಡಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಆ ರೀತಿ ವಾದಪತ್ರದಲ್ಲಿ ಪರಿಹಾರ ಕೇಳದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ. ಎಂದರೆ ಸರಿಯಲ್ಲ. ಮೃತ ವಾದಿ ಯುಸುಫಸಾಬ ಮತ್ತು 1 ನೇ ಪ್ರತಿವಾದಿ ನಡುವೆ ಏನೇನು ಕರಾರು ಆಗಿವೆ ಮತ್ತು ಅವರು ಎಲ್ಲೆಲ್ಲಿ ಹೋಗಿದ್ದರು ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ. ದಿಃ22-02-2000 ಪರಡಿ ನಂ.19 ಕ್ಷೇತ್ರ 2 ಗುಂಟೆ ಆಸ್ತಿಯನ್ನು 1 ನೇ ಪ್ರತಿವಾದಿಗೆ ಮೃತ ವಾದಿ ಹಿಬಾಭಕ್ಷಿಶ ಮೂಲಕ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಮೃತ ವಾದಿ ಹೆಬ್ಬಟ್ಟಿನ ಸಹಿ ಮಾಡುತ್ತಿದ್ದರು. ದಾವಾ ಆಸ್ತಿ ಎರಡುವರೆ ಗುಂಟೆ ಇದೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿದ್ದೇನೆ. ನಿಪಿ-2 ರಲ್ಲಿ ದಾವಾ ಆಸ್ತಿ ವಿಸ್ತೀರ್ಣ 2 ಗುಂಟೆ ನಮೂದಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ದಾವಾ ಆಸ್ತಿ ವಿಸ್ತೀರ್ಣ 2 ಗುಂಟೆ ನಮೂದಿಸಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹಿಬಾಭಕ್ಷಿಶ ಆಧಾರದ ಮೇಲೆ 1 ನೇ ಪ್ರತಿವಾದಿಯ ಹೆಸರು ಕಂದಾಯ ದಾಖಲೆಗಳಲ್ಲಿ ನಮೂದಾಗಿದೆ ಎಂದರೆ ಸರಿ. ದಿಃ 20-05-2000 ರಂದು ಮೊಟೇಶನ್ ನಂ.9455 ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲಾ. ನನ್ನ ತಂದೆ ಜೀವಂತ ಇದ್ದ ಕಾಲಕ್ಕೆ ಯು ಫಾರಂ ಜಾರಿಯಾದ ನಂತರ ಅವರು ಯಾವುದೇ ತಕರಾರನ್ನು ಕಂದಾಯ ಇಲಾಖೆಗೆ ಸಲ್ಲಿಸಿಲ್ಲ ಎಂದರೆ ಸರಿ. ದಿಃ20-05-2000 ರಿಂದ ಇಲ್ಲಿಯವರೆಗೂ ತಹಶೀಲ್ದಾರ ಆದೇಶದ ವಿರುದ್ಧ ಉಪವಿಭಾಗಾಧಿಕಾರಿ ಹಾಗೂ ಪುರಸಭೆಯ ಆದೇಶದ ಪ್ರಕಾರ ಉಪವಿಭಾಗಾಧಿಕಾರಿ ಇವರಲ್ಲಿ ಯಾವುದೇ ಮೇಲ್ಮನವಿಯನ್ನು ಕಾಲಪರಿಮಿತ ಅವಧಿಯಲ್ಲಿ ಸಲ್ಲಿಸಿಲ್ಲ ಎಂದರೆ ಸರಿ. ಅದೇ ರೀತಿ ನ್ಯಾಯಾಲಯದಲ್ಲಿ ಕಾಲಪರಿಮಿತ ಅವಧಿಯಲ್ಲಿ ಯಾವುದೇ ದಾವೆಯನ್ನು ಸಲ್ಲಿಸಿಲ್ಲ ಎಂದರೆ ಸರಿ. 2000 ಇಸವಿಯಿಂದ ಇಲ್ಲಿಯವರೆಗೂ ದಾವಾ ಆಸ್ತಿಗೆ ಕಂದಾಯವನ್ನು ಪಾವತಿಸಿಲ್ಲ ಎಂದರೆ ಸರಿ.

ಈ ಹಂತದಲ್ಲಿ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೇಳಿದ್ದರಿಂದ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.